ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 415/2019

(ಫ್ರಾಸಾ-3 ಚಾಸಾ-3 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 19.01.2026

| | | |
|---|---|---|
| ಸಾಕ್ಷಿದಾರರ ಹೆಸರು | - | ಸುರೇಶ್ |
| ತಂದೆಯ ಹೆಸರು | - | ಅಣ್ಣಮುತ್ತು |
| ವಯಸ್ಸು | - | 43 ವರ್ಷ, |
| ಉದ್ಯೋಗ | - | ಗಾರೆ ಕೆಲಸ |
| ವಾಸ | - | ಕಿತ್ತಗನೂರು ಕಾಲೋನಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ನನ್ನ ಮನೆಯ ಹತ್ತಿರ ವಾಸವಾಗಿದ್ದರು. ಚಾಸಾ2 ನನ್ನ ಬಾಮ್ಮೈದುನ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. 6-7 ವರ್ಷಗಳ ಹಿಂದೆ ನಾನು, ಚಾಸಾ-1, ಚಾಸಾ-2 ಮತ್ತು ಆರೋಪಿ ಅಕ್ಕಪಕ್ಕ ಮನೆಗಳ ವಾಸಿಗಳಾಗಿದ್ದೆವು.

2. 2019 ನೇ ಮೇ ತಿಂಗಳಿನಲ್ಲಿ ಆರೋಪಿಯು ತನ್ನ ಮನೆಯ ಬಳಿ ತನ್ನ ಕಾರನ್ನು ರಿವರ್ಸ್ ತೆಗೆಯುವಾಗ ಚಾಸಾ-2 ರವರ ಮನೆಯ ಮುಂದೆ ನಿಲ್ಲಿಸಿದ್ದ ಬುಲೇರೋ ಜೀಪ್ ಗೆ ಡಿಕ್ಕಿ ಪಡಿಸಿದ್ದು ಚಾಸಾ-2 ರವರು ಅದನ್ನು ಕೇಳಿದಾಗ ಅವರಿಬ್ಬರ ನಡುವೆ ಗಲಾಟೆ ಆಗಿದ್ದು ಚಾಸಾ-2 ರವರು ನನಗೆ ಫೋನ್ ಮಾಡಿ ಕರೆದಿದ್ದು ನಾನು ಫೋನ್ ಮಾಡಿದ ಹತ್ತು ಹದಿನೈದು ನಿಮಿಷಗಳಲ್ಲಿ ಸ್ಥಳಕ್ಕೆ ಹೋದಾಗ ಎಲ್ಲರು ಗುಂಪು ಸೇರಿದ್ದು ಚಸಾ-1 ರವರಿಗೆ ಬಾಯಲ್ಲಿ ರಕ್ತ ಬರುತ್ತಿತ್ತು.

3. ನಾನು ನನ್ನ ಜೀಪಿನಲ್ಲಿ ಚಾಸಾ-1 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಗಲಾಟೆ ನಡೆದಾಗ ಸಂಜೆ ಸುಮಾರು 06.30 ಘಂಟೆ ಆಗಿತ್ತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎ ವಕೀಲರಿಂದಃ</u>**

4. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ಚಾಸಾ2 ಹಾಗೂ ಆರೋಪಿಯ ಮನೆಗಳು ಎದುರು ಬದಿರು ಇವೆ. ಚಾಸಾ-1 ಇವರ ಮನೆ ಸುಮಾರು 3 ನಿವೇಶನಗಳು ಆದ ನಂತರ ಇವೆ. ಆರೋಪಿಯು ತನ್ನ ಕಾರನ್ನು ನನ್ನ ಜೀಪಿಗೆ ಗುದ್ದಿಸಿದರು ಎಂದು ಚಾಸಾ-2 ನನಗೆ ಫೋನ್ ಮುಖಾಂತರ ಹೇಳಿದರು. ನನ್ನ ಜೀಪಿಗೆ ಅಷ್ಟೇನು ಜಖಂ ಆಗಿರದೇ ಆರೋಪಿಯ ಕಾರಿಗೆ ಬಹಳಷ್ಟು ಜಖಂ ಆಗಿದ್ದರಿಂದ ನಾನು ನನ್ನ ವಾಹನಕ್ಕೆ ಜಖಂ ಆದ ಬಗ್ಗೆ ಪೋಲಿಸರಿಗೆ ದೂರು ಕೊಟ್ಟಿಲ್ಲ ಹಾಗೂ ವಿಮೆ ಕ್ಲೇಮ್ ಮಾಡಿರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಆರೋಪಿಯ ಮನೆಯ ಮುಂದೆ ನನ್ನ ಜೀಪನ್ನು ಪಾರ್ಕ್ ಮಾಡುತ್ತಿದ್ದು ನಾನು ಹೇಳಿದಂತೆ ಯಾವುದೇ ಅಪಘಾತ ಆಗದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಚಾಸಾ-1 ನನ್ನ ಸಂಬಂಧಿಯಲ್ಲ. ಚಾಸಾ-1ರವರಿಗೆ ಸರಿಯಾಗಿ ಕಿವಿ ಕೇಳುವುದಿಲ್ಲ ಆದರೆ ಕಣ್ಣು ಕಾಣುತ್ತದೆ. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಚಾಸಾ-1 ಮತ್ತು 2 ಇವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು